# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕುಶಾಲನಗರ

**ಸಿ.ಸಿ. ಸಂಖ್ಯೆ:741/2020**

ಪಿರ್ಯಾದುದಾರರು : ಸರ್ಕಾರ

- ವಿರುದ್ಧ -

ಆರೋಪಿ : ಜಗನ್ನಾಥ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ

ಪ್ರ.1: ಅಭಿಯೋಜನೆ ಪರ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ಕೇಳಿಸಿಕೊಂಡಿದ್ದೀರಾ?

ಉ: ಕೇಳಿದ್ದೀನಿ

ಪ್ರ 2 ಫ್ರಾಸಾ1 ಪುಟ್ಟೇಗೌಡ ಹೆಚ್ ಎನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚಾಸಾ-2 ರಿಂದ 6 ರವರ ಪರಿಚಯವಿದ್ದು, ತನಗೆ ಆರೋಪಿ ಪರಿಚಯವಿದ್ದು, ಅವರು ತನ್ನ ಹಳೆಯ ಸಂಬಂಧಿಕರಾಗಿದ್ದು ದಿನಾಂಕ : 24.02.2020 ರಂದು ಸಮಯ ಬೆಳಗ್ಗೆ 11.30 ಗಂಟೆಗೆ ತಾನು ಮತ್ತು ತನ್ನ ಅಣ್ಣನ ಮಗ ಚಾಸಾ-4 ರವರು ಹೆಬ್ಬಾಲೆಲ್ಲಿ ಇರುವ ಗ್ರಾಮ ಪಂಚಾಯ್ತಿಗೆ ಹೋಗುತ್ತಿರುವಾಗ, ಹೆಬ್ಬಾಲೆ ಸರ್ಕಲ್ ನಲ್ಲಿ ಇರುವ ಚಾಸಾ-6 ರವರ ಅಂಗಡಿಯ ಮುಂದೆ ಹಳೆಗೋಟೆ ಗ್ರಾಮದ ಆರೋಪಿಯಾದ ನೀವು ಚಾಸಾ 1 ರವರನ್ನು ಏಕಾಏಕಿ ತಡೆದು ನಿನ್ನ ಅಮ್ಮನನ್ನು ಕೇಯುತ್ತೇನೆ, ಪಂಚಾಯ್ತಿಗೆ ಹೋಗು ಸೂಳೆ ಮಗನೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರ: ಸುಳ್ಳು

ಪ್ರ 3 ಫ್ರಾಸಾ1 ರವರು ಮುಂದುವರಿದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಂತರ ಅಲ್ಲೆ ಬಿದಿದ್ದ ಬೊರ್ಡಸ್ ಕಲ್ಲನ್ನು ತೆಗೆದು ತನ್ನ ಎಡಭಾಗದ ಭುಜಕ್ಕೆ ಹೊಡೆದಿದ್ದು, ನಂತರ ತನ್ನನ್ನು ತಳ್ಳಿ ಬೀಳಿಸಿ, ತನ್ನ ಬಲ ಕಾಲನ್ನು ತುಳಿದು ನೋವುಂಟು ಮಾಡಿದ್ದು, ನಂತರ ಅಲ್ಲಿಗೆ ಬಂದ ಚಾಸಾ-4, 5 ಮತ್ತು 2 ರವರು ತನ್ನನ್ನು ಉಪಚರಿಸಿದ್ದು, ನಂತರ ಆರೋಪಿಯಾದ ನೀವು ಈಗ ನೀನು ಬದುಕಿಕೊಂಡು ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಹೇಳಿ, ಕಲ್ಲನ್ನು ಅಲ್ಲೆ ಬಿಸಾಡಿ ಹೊರಟು ಹೋಗಿದ್ದು, ನಂತರ ಚಾಸಾ-4 ಮತ್ತು 5 ರವರು ಯಾವುದೊ ಒಂದು ಕಾರಿನಲ್ಲಿ ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದು, ನಂತರ ವೈದ್ಯಾದಿಕಾರಿಗಳು ಚಿಕಿತ್ಸೆ ಕೊಟ್ಟಿದ್ದು, ನಂತರ ಪೊಲೀಸರು ಆಸ್ಪತ್ರೆಯಲ್ಲಿ ತನ್ನ ಹೇಳಿಕೆಯನ್ನು ಪಡೆದುಕೊಂಡು, ನಂತರ ನೋವು ಹೆಚ್ಚಾಗಿದ್ದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ

ತನ್ನನ್ನು ಮೈಸೂರಿನ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ದಿನಾಂಕ 28.07.2020 ರಂದು ಮಧ್ಯಾಹ್ನ 1.00 ಗಂಟೆಗೆ ಚಾಸಾ–6 ರವರ ಅಂಗಡಿಯ ಮುಂದೆ ಪೊಲೀಸರು ಸ್ಥಳ ಪಂಚನಾಮೆ ಮಾಡಲು ಬಂದಿದ್ದು, ಅಲ್ಲಿ ಪೊಲೀಸರು ಘಟನೆಯ ಬಗ್ಗೆ ತನ್ನನ್ನು ಕೇಳಿದ್ದು, ನಂತರ ಅಲ್ಲಿ ತನಗೆ ಹೊಡೆದ ಕಲ್ಲನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು, ಅದಕ್ಕೆ ತನ್ನ ಹಾಗೂ ಪಂಚರ ಸಹಿಯನ್ನು ಪಡೆದು, ಆ ಸಮಯದಲ್ಲಿ ಚಾಸಾ–2 ಮತ್ತು 3 ತನ್ನ ಜೊತೆಗಿದ್ದು, ನಿಪಿ–2 ರಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿದ್ದು, ಸಾಕ್ಷಿಗೆ ಒಂದು ಕಲ್ಲನ್ನು ತೋರಿಸಲಾಗಿ ಆರೋಪಿ ಅದೇ ಕಲ್ಲಿನಿಂದ ತನಗೆ ಹೊಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 4 ಫ್ರಾಸಾ 2 ಶ್ರೀನಿವಾಸ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚಾಸಾ–1, ಚಾಸಾ 3 ರಿಂದ ಚಾಸಾ 6 ರವರ ಪರಿಚಯವಿದ್ದು, ತನಗೆ ಆರೋಪಿಯ ಪರಿಚಯವಿದ್ದು, ಮಹಜರನ್ನು ಹಾಗೂ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ತಾನು ಪೊಲೀಸರಿಗೆ ಘಟನೆಯ ಸಂಬಂಧ ಹೇಳಿಕೆಯನ್ನು ನೀಡಿದ್ದು, ದಿನಾಂಕ 28.07.2020 ರಂದು ನಿಪಿ–2 ಕ್ಕೆ ಹೆಬ್ಬಾಳೆ ಗ್ರಾಮದ ಮಂಜು ಎಂಬುವವರ ಅಂಗಡಿಯ ಬಳಿ ಸಹಿ ಮಾಡಿದ್ದು, ಸದ್ರಿ ದಿನಾಂಕದಂದು ಪೊಲೀಸರು ಅಲ್ಲಿಗೆ ಕರೆಸಿ ಲಿಖಿತ ಹೇಳಿಕೆಗೆ ತನ್ನ ಸಹಿಯನ್ನು ಪಡೆದುಕೊಂಡಿದ್ದು, ನಿಪಿ–2 ರಲ್ಲಿ ಬರೆದಿರುವ ವಿಷಯವನ್ನು ಕೇಳಿ ತಿಳಿದುಕೊಂಡಿದ್ದು, ನಿಪಿ–2 ಕ್ಕೆ ಸಹಿ ಮಾಡುವಾಗ ತಾನು ಚಾಸಾ1, ಚಾಸಾ 3 ಹಾಗೂ ಪೊಲೀಸ್ ನವರು ಹಾಜರಿದ್ದು, ಪೋಲೀಸ್ ನವರು ಮಹಜರ್ ಮಾಡುವ ಸಮಯದಲ್ಲಿ ಒಂದು ಛಾಯ ಚಿತ್ರವನ್ನು ತೆಗೆದುಕೊಂಡಿದ್ದು, ಮಹಜರ್ ಕಾಲದಲ್ಲಿ ಚಾಸಾ–1 ರವರಿಗೆ ಆರೋಪಿ ಹಲ್ಲೆ ಮಾಡಿದ ಕಲ್ಲನ್ನು ಪೊಲೀಸ್ ನವರು ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 5 ಫ್ರಾಸಾ 2 ರವರು ಮುಂದುವರಿದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 28.07.2020 ರಂದು ತಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದು, ದಿನಾಂಕ 24.07.2020 ರಂದು ತಾನು ಚಾಸಾ–6 ರವರ ಅಂಗಡಿಗೆ ಸಾಮಾನು ತೆಗೆದುಕೊಂಡು ಬರಲು ಹೋಗಿದ್ದೆ. ಆಗ ಬೆಳಗ್ಗೆ ಸುಮಾರು 11.00 –11.30 ಗಂಟೆಯ ಸಮಯದಲ್ಲಿ ಆ ಸಮಯದಲ್ಲಿ ಚಾಸಾ–1 ಮತ್ತು ಚಾಸಾ–4 ರವರು ನಡೆದುಕೊಂಡು ಪಂಚಾಯ್ತಿಯ ಕಡೆಗೆ ಬರುತ್ತಿರುವಾಗ, ಆರೋಪಿಯಾದ ನೀವು ಚಾಸಾ–1 ರವರನ್ನು ಅಡ್ಡ ಹಾಕಿ ನಿಲ್ಲಿಸಿ, ಅವ್ಯಾಚ್ಯ ಶಬ್ದಗಳಿಂದ ಬೈದು, ಪಕ್ಕದಲ್ಲಿ ಬಿದ್ದಿದ್ದ ಬೋಡ್ರಸ್ ಕಲ್ಲನ್ನು ಎತ್ತಿಕೊಂಡು ಚಾಸಾ–1 ರವರ ಎಡ ಭಾಗದ ಭುಜಕ್ಕೆ ಹೊಡೆದು, ತಳ್ಳಿ ಬೀಳಿಸಿ, ಕಾಲಿನಲ್ಲಿ ಹಾಕಿ ತುಳಿದು ನೋವು ಪಡಿಸಿದ್ದು, ನಂತರ ಕೆಳಗೆ ಬಿದ್ದಿದ್ದ ಚಾಸಾ–1 ರವರನ್ನು ನಾನು, ಚಾಸಾ–4 ಮತ್ತು ಚಾಸಾ–6 ರವರು ಯಾವುದೊ ಒಂದು ಕಾರಿನಲ್ಲಿ ಚಾಸಾ–1 ರವರನ್ನು ಉಪಚರಿಸಿ ಯಾವುದೊ ಒಂದು ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗಾಗಿ ದಾಖಲು ಮಾಡಲಾಯಿತು. ನಂತರ ಪೊಲೀಸ್ ನವರಿಗೆ ಚಾಸಾ–1 ರವರು ದೂರು ಕೊಟ್ಟ ಬಗ್ಗೆ ತಿಳಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 6 ಫ್ರಾಸಾ 3 ಸತೀಶ ರವರು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 24.07.2020 ರಂದು ಬೆಳಗ್ಗೆ 11.30 ಗಂಟೆಗೆ ಫ್ರಾಸಾ–1 ಹಾಗೂ ಅವರ ಅಣ್ಣನವರ ಮಗ ಚಾಸಾ–4 ರವರು ಪಂಚಾಯ್ತಿಯ ಆಫೀಸ್ ಕಡೆಗೆ ನಡೆದು ಕೊಂಡು ಹೋಗುತ್ತಿದ್ದಾಗ, ಅದೇ ಸಮಯಕ್ಕೆ ಚಾಸಾ–6 ರವರ ಅಂಗಡಿಯ ಮುಂದೆ ಆರೋಪಿ ಫ್ರಾಸಾ–1 ರವರನ್ನು ತಡೆದು ಅವ್ಯಾಚ್ಯ ಶಬ್ದಗಳಿಂದ ಬೈದು , ಒಂದು ಬೋಡ್ರಸ್ ಕಲ್ಲನ್ನು ತೆಗೆದು ಫ್ರಾಸಾ–1 ರವರ ಎಡ ಭಾಗದ ಭುಜಕ್ಕೆ ಗುದ್ದಿ , ಅವರನ್ನು ನೆಲಕ್ಕೆ ಬೀಳಿಸಿದ್ದು, ನಂತರ ಕಾಲಿನಿಂದ ಫ್ರಾಸಾ–1 ರವರ ಬಲ ಗಾಲನ್ನು ತುಳಿದು ನೋವುಂಟು ಮಾಡಿದ್ದು, ನಂತರ ಕಲ್ಲನ್ನು ಅಲ್ಲೆ ಬೀಸಾಡಿ ಫ್ರಾಸಾ–1 ರವರಿಗೆ ಕೊಲೆ ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋಗಿದ್ದು, ನಂತರ ತಾನು ಫ್ರಾಸಾ–2 ಮತ್ತು ಚಾಸಾ–4 ರವರು ಫ್ರಾಸಾ–1 ರವರನ್ನು ಉಪಚರಿಸಿ, ಅವರನ್ನು ಯಾವುದೊ ಒಂದು ಕಾರಿನಲ್ಲಿ ಚಿಕಿತ್ಸೆಗಾಗಿ ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಫ್ರಾಸಾ–1 ರವರು ಆರೋಪಿಯ ವಿರುದ್ಧ ದೂರು ದಾಖಲಿಸಿರುವ ವಿಚಾರ ತಿಳಿದು ಬಂದಿರುತ್ತದೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?
ಉತ್ತರಃ

ಪ್ರ 7 ಫ್ರಾಸಾ 4 ಸೂರ್ಯ ರವರು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ರವರು ತನ್ನ ಚಿಕ್ಕಪ್ಪನಾಗಿದ್ದು, ಚಾಸಾ 2 ಹಾಗೂ ಆರೋಪಿಯನ್ನು ನೋಡಿ ಪರಿಚಯವಿದ್ದು, ಚಾಸಾ 3 ರವರ ಪರಿಚಯವಿರುವುದಿಲ್ಲ. ಮುಂದುವರಿದು ದಿನಾಂಕ 24.07.2020 ರಂದು ತಾನು ಮತ್ತು ಚಾಸಾ 1 ರವರು ಬೆಳಗ್ಗೆ 11.30 ಗಂಟೆ ಸಮಯಕ್ಕೆ ಪಂಚಾಯಿುತಿ ಕಚೇರಿ ಕಡೆಗೆ ಹೆಬ್ಬಾಲೆಯಲ್ಲಿ ಹೋಗುತ್ತಿರುವಾಗ ಚಾಸಾ 5 ರವರ ಅಂಗಡಿ ಮುಂದೆ ಹೋಗುತ್ತಿದ್ದಾಗ ಆರೋಪಿ ಚಾಸಾ 1 ರವರನ್ನು ತಡೆದು ಬೋಳಿ ಮಗನೆ , ನಿನ್ನ ಅವ್ವನನ್ನು ಕೇಯಿುಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಬೋಡ್ರಸ್ ಕಲ್ಲನ್ನು ತೆಗೆದುಕೊಂಡು ಚಾಸಾ 1 ರವರ ಎಡಭಾಗದ ಭುಜಕ್ಕೆ ಹೊಡೆದು ತಳ್ಳಿ ಬೀಳಿಸಿ, ಬಲಕಾಲು ತುಳಿದು, ನೋವು ಪಡಿಸಿ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದಾಗ ಚಾಸಾ 1 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದು, ತಾನು ಚಾಸಾ 2, ಚಾಸಾ 6 ರವರು ಚಾಸಾ 1 ರವರನ್ನು ಉಪಚರಿಸಿ ಯಾವುದೋ ಒಂದು ಕಾರಿನಲ್ಲಿ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಚಿಕಿತೆಗೆ ದಾಖಲಿಸಿರುತ್ತಾರೆ. ನಂತರ ಚಾಸಾ 1 ರವರು ಆರೋಪಿಯಾದ ನಿಮ್ಮ ವಿರುದ್ಧ ದೂರು ನೀಡಿರುವುದಾಗಿ ತನಗೆ ತಿಳಿದು ಬಂದಿದ್ದು, ಹೇಳಿಕೆಯನ್ನು ತನಿಖಾಧಿಕಾರಿಗಳ ಮುಂದೆ ದಿನಾಂಕ 29.07.2020 ರಂದು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?
ಉತ್ತರಃ

ಪ್ರ 8 ಫ್ರಾಸಾ 5 ಡಾ ಕೀರ್ತಿರಾಜ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 24.07.2020 ರಂದು ಮದ್ಯಾಹ್ನ 1.30 ಗಂಟೆಯ ಸಮಯದಲ್ಲಿ ನಾನು ಕರ್ತವ್ಯದಲ್ಲಿ

ಇದ್ದಾಗ, ಚಾಸಾ 1 ರವರು ಬೆಳಗ್ಗೆ 11.30 ಸಮಯದಲ್ಲಿ ಹೆಬ್ಬಾಲೆಯಲ್ಲಿ ಆದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರೀಕ್ಷಿಸಿದಾಗ,

1. Sprain right ankle with fracture calcaneum
2. Tenderness over left side of chest.

ತನ್ನ ಪ್ರಕಾರ ಒಂದನೇ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು, ಎರಡನೇ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಅದರಂತೆ ತಾನು ನಿಪಿ 4 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 9 ಫ್ರಾಸಾ 6 ಪ್ರವೀಣ ಬಿ.ವಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 24.07.2020 ರಂದು ನಾನು ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪ್ರಭಾರದಲ್ಲಿದ್ದಾಗ ಕುಶಾಲನಗರ ಸರ್ಕಾರಿ ಆಸ್ಪತ್ರೆಯಿಂದ ವೈದ್ಯಾಧಿಕಾರಿಗಳು ಹೊಡೆದಾಟದಿಂದ ಚಾಸಾ 1 ರವರು ಚಿಕಿತ್ಸೆಗೆ ದಾಖಲಾಗಿರುವ ಬಗ್ಗೆ ತಿಳಿಸಿದ್ದು ನಾನು ಸಮಯ ಮಾಧ್ಯಹ್ನ 3.00 ಗಂಟೆಗೆ ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ತೆರಳಿ ಚಾಸಾ 1 ರವರ ಹೇಳಿಕೆ ಪುಕಾರನ್ನು ಸಮಯ 3.30 ರಿಂದ 4.10 ರವರೆಗೆ ವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಪಡೆದುಕೊಂಡು ಠಾಣೆಗೆ ವಾಪಸಾಗಿ ಸಮಯ 4.45 ಗಂಟೆಗೆ ಠಾಣಾ ಗುನ್ನಾ ನಂ 63/2020 –20 ರಂತೆ ಪ್ರಕರಣವನ್ನು ದಾಖಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 10 ಫ್ರಾಸಾ 6 ರವರು ಮುಂದುವರಿದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ : 28.07.2020 ರಂದು ಕೃತ್ಯ ಸ್ಥಳದ ಮಹಜರು ಕೈಗೊಳ್ಳುವ ಸಲುವಾಗಿ ಹೆಬ್ಬಾಲೆ ನಗರಕ್ಕೆ ಹೋದಾಗ ಪಿರ್ಯಾದಿರವರು ಕೃತ್ಯ ಸ್ಥಳದಲ್ಲಿ ಹಾಜರಿದ್ದು ಕೃತ್ಯ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ಸ್ಥಳಕ್ಕೆ ಪಂಚರಾದ ಚಾಸಾ 2 ಮತ್ತು 3 ರವರಿಗೆ ನೋಟಿಸನ್ನು ಜಾರಿ ಮಾಡಿ ಮಹಜರು ಕ್ರಮವನ್ನು ಸಮಯ 13.00 ಗಂಟೆಯಿಂದ 14.00 ಗಂಟೆರವರೆಗೆ ಜರುರಿಸಲಾಯಿತು. ಆ ಸಮಯದಲ್ಲಿ ಪಂಚರ ಸಮಕ್ಷಮದಲ್ಲಿ ಪಿರ್ಯಾದಿದಾರರು ಹಾಜರುಪಡಿಸಿದ ಒಂದು ಬಾಡ್ರಸ್ ಕಲ್ಲನ್ನು ಅಮಾನತುಪಡಿಸಿಕೊಂಡು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು. ಸದರಿ ಮಹಜರನ್ನು ಠಾಣಾ ಸಿಬ್ಬಂದಿ ಪಿ ಸಿ 247 ರ ಹೆಚ್ ಎಸ್ ಶ್ರೀನಿವಾಸ್ ರವರ ಮೂಲಕ ಮಹಜರನ್ನು ಬರೆಸಲಾಗಿರುತ್ತದೆ. ನಂತರ ಠಾಣೆಗೆ ವಾಪಸಾಗಿ ಸದರ ಅಮಾನತುಪಡಿಸಿಕೊಂಡ ಸ್ವತ್ತನ್ನು ಮಾಲು ಪಟ್ಟಿ ಸಂಖ್ಯೆ 76/2020 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಡಲಾಯಿತು. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 11 ಪ್ರಾಸಾ 6 ರವರು ಮುಂದುವರಿದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 27.07.2020 ರಂದು ಈ ಪ್ರಕರಣದ ಆರೋಪಿ ಜಗನ್ನಾಥರವರಿಗೆ 41 ಎ ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಲಾಯಿತು. ದಿಃ 28.08.2020 ರಂದು ಪಂಚರಾದ ಚಾಸಾ 2 ಮತ್ತು 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೆ ದಿನ ಮಹಜರ ಕೈಗೊಳ್ಳುವ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಯಿತು. ನಂತರ ಫೋಟೋವನ್ನು ಚಾಸಾ 8 ರವರ ಸ್ಟೂಡಿಯೋದಲ್ಲಿ ನನ್ನ ಮೊಬೈಲ್ ನಿಂದ ತೆಗೆದ ಫೋಟೋವನ್ನು ಅವರ ಮುಖಾಂತರ ಪ್ರಿಂಟ್ ತೆಗೆಸಿ ಅವರಿಂದ 65 ಬಿ ಅಡಿಯಲ್ಲಿ ದೃಡೀಕೃತ ಪತ್ರವನ್ನು ಪಡೆಯಲಾಯಿತು. ದಿಃ 30.07.2020 ರಂದು ಗಾಯಳು ಹಾಜರುಪಡಿಸಿದ ಎಕ್ಸರೆ ಕಾಪಿಯನ್ನು ಕಡತಕ್ಕೆ ಹೊಂದಿಕೊಂಡಿರುತ್ತೇನೆ. ನಂತರ ಚಾಸಾ 4 ರಿಂದ 6 ರವರ ಹೇಳಿಕೆಯನ್ನು ಪಡೆಯಲಾಯಿತು. ದಿಃ 30.07.2020 ರಂದು ಗಾಯಳುವಿನ ಗಾಯದ ಪ್ರಮಾಣ ಪತ್ರವನ್ನು ಕೋರಿ ಕುಶಾಲನಗರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಪತ್ರವನ್ನು ಕಳುಹಿಸಿಕೊಡಲಾಯಿತು. ನಂತರ ಅದೆದಿನ ವೈದ್ಯಾಧಿಕಾರಿಗಳು ಗಾಯದ ಪ್ರಮಾಣ ಪತ್ರವನ್ನುಕಳುಹಿಸಿಕೊಟ್ಟಿದ್ದು ಸದರಿ ಪ್ರಕರಣದ ಕಡತವನ್ನು ಅಳವಡಿಸಿಕೊಂಡಿರುತ್ತೇನೆ. ದಿಃ 07.08.2020 ರಂದು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ . ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ 12 ಪ್ರಾಸಾ 7 ಪ್ರಶಾಂತ್ ಡಿಸೋಜಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚಾಸಾ 9 ರವರು ಪರಿಚಯವಿದ್ದು, ಕಲಂ 65 ಬಿ ಅಡಿಯಲ್ಲಿ ನೀಡಿದ ದೃಡೀಕರಣ ಪತ್ರವನ್ನು ನಿಪಿ 6 ರಂತೆ ಗುರುತಿಸಿದ್ದು ದಿನಾಂಕ 28.07.2020 ರಂದು ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯ ಪೋಲಿಸರಾದ ಚಾಸಾ 9 ರವರು ಅವರ ವಿಮೋ ಮೊಬೈಲನ ಮೆಮೊರಿ ಕಾರ್ಡನ್ನು ತನಗೆ ಕೊಟ್ಟು ಮೂರು ಫೋಟೋಗಳನ್ನು ಪ್ರಿಂಟ್ ತೆಗೆಯಲು ಹೇಳಿದ್ದು, ತಾನು ಸದರಿ ಫೋಟೋವನ್ನು ಹೆಚ್ ಸಿ ಎಲ್ ಸಿಸ್ಟಂಗೆ ಹಾಕಿ ಎಪ್ಸಾನ್ ಪ್ರಿಂಟರನಿಂದ ಮೂರು ಫೋಟೋಗಳನ್ನು ತೆಗೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳ ಬಯಸುವಿರಿ?

ಉತ್ತರಃ

ಪ್ರ: 13 ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಉ: ನನ್ನ ಮೇಲೆ ಆ-1 ಮತ್ತು ಆ-4 ರವರು ಹಲ್ಲೆ ಮಾಡಿ, ನನ್ನನ್ನು ಘಾಸಿ ಗೊಳಿಸಿ ನನ್ನ [illegible] [illegible] ಮಾಡಿರುತ್ತಾರೆ. ನಂತರ ಎದ್ದು ಕಾರನ್ನು ಚಾಲಾಯಿಸಿಕೊಂಡು ಬಂದು ಮಾರು ತೋರಿಸುತ್ತಿನೆ. ಸುಳ್ಳು ಸಾಕ್ಷ್ಯವನ್ನು ಸೃಷ್ಟಿಮಾಡಿಕೊಂಡು ಆ-7 ರವರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ.

ಪ್ರ:14 ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದೆಯೇ?

ಉ: ಇದೆ.

( ತೆರೆದ ನ್ಯಾಯಾಲಯದಲ್ಲಿ ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಬರೆದು, ಓದಿ, ಹೇಳಿ ನಂತರ ಆರೋಪಿಯು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿದೆ)

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಕುಶಾಲನಗರ